## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

ಸತ್ರ ಪ್ರಕರಣ ಸಂಖ್ಯೆ.35/2024

ಪಿರ್ಯಾದುದಾರರು : ಕಿರುಗಾವಲು ಪೊಲೀಸ್ ಠಾಣೆ.

- ವಿರುದ್ಧ -

ಆರೋಪಿಗಳು : ಶ್ರೀ ಗೋವಿಂದರಾಜು ಜಿ.ಸಿ. ಮತ್ತು ಇತರರು.

: ದೋಷಾರೋಪಣೆ :

ನಾನು ಶ್ರೀಮತಿ ಸಯೀದುನ್ನೀಸ, ಎಂ.ಎ., ಎಲ್‌ಎಲ್.ಬಿ., 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ :

ನೀವು ಆರೋಪಿಗಳು :

1. ಶ್ರೀ ಗೋವಿಂದರಾಜು ಜಿ.ಸಿ., 26 ವರ್ಷ,
   ಬಿನ್ ಚಂದ್ರಶೇಖರ್,
   ವಾಸಃ ಗೋಪನಹಳ್ಳಿ ಗ್ರಾಮ,
   ಚಿಕ್ಕಅರಸಿನಕೆರೆ ಹೋಬಳಿ,
   ಮದ್ದೂರು ತಾಲ್ಲೂಕು,
   ಮಂಡ್ಯ ಜಿಲ್ಲೆ.

2. ಶ್ರೀ ಬಸವರಾಜು ಬಿ.ಟಿ., 30 ವರ್ಷ,
   ಬಿನ್ ಲೇಟ್ ತಮ್ಮಯ್ಯ,
   ವಾಸಃ ಬೋರಾಪುರ ಗ್ರಾಮ,
   ಕಸಬಾ ಹೋಬಳಿ, ಮದ್ದೂರು ತಾಲ್ಲೂಕು,
   ಮಂಡ್ಯ ಜಿಲ್ಲೆ.

3. ಶ್ರೀ ಶರತ್, ವಿ.ಕೆ., 32 ವರ್ಷ,
   ಬಿನ್ ಕೃಷ್ಣಪ್ಪ,
   ವಾಸಃ ವಳಗೆರೆಹಳ್ಳಿ ಗ್ರಾಮ,
   ಕಸಬಾ ಹೋಬಳಿ, ಮದ್ದೂರು ತಾಲ್ಲೂಕು,
   ಮಂಡ್ಯ ಜಿಲ್ಲೆ.

ಮೊದಲನೆಯದಾಗಿ, 1 ನೇ ಆರೋಪಿಯಾದ ನೀವು ಚಾಸಾ-1 ಸಿದ್ದಮೂರ್ತಿರವರಿಗೆ ನೀನು ವ್ಯಾನಿನಲ್ಲಿ ಬರುವ ಹೆಂಗಸರ ಜೊತೆ ಸಲುಗೆಯಿಂದ ಮಾತನಾಡುತ್ತಿಯಲ್ಲ ಅವರನ್ನು ಇಟ್ಟುಕೊಂಡಿದ್ದೀಯಾ, ಇವರನ್ನು ಇಟ್ಟುಕೊಂಡಿದ್ದೀಯಾ ಎಂದು ರೇಗಿಸಿದ

ವಿಚಾರವಾಗಿ ನಿಮ್ಮಿಬ್ಬರಿಗೂ ಮದ್ದೂರು ತಾಲ್ಲೂಕಿನ ಸೋಮನಹಳ್ಳಿ ಗ್ರಾಮದ ಬಳಿ ಇರುವ ಸರವಿ ಗಾರ್ಮೆಂಟ್ಸ್ ಬಳಿ ವ್ಯಾನಿನಲ್ಲಿ ಗಲಾಟೆಯಾಗಿತ್ತು ಎನ್ನುವ ವಿಚಾರವಾಗಿ 1ನೇ ಆರೋಪಿಯಾದ ನೀವು ದ್ವೇಷವನ್ನು ಇಟ್ಟುಕೊಂಡು ದಿನಾಂಕಃ 04.02.2023 ರಂದು ರಾತ್ರಿ 12.45 ಗಂಟೆ ಸಮಯದಲ್ಲಿ ಚಾಸಾ-1 ರವರು ಕಿರುಗಾವಲು ಸಂತೆಮಾಳದಲ್ಲಿರುವ ರಾಧಶ್ರೀ ಸರ್ವೀಸ್ ಸ್ಟೇಷನ್ ಹೆಸರಿನ ಹೆಚ್.ಪಿ. ಪೆಟ್ರೋಲ್ ಬಂಕ್ ಮುಂಭಾಗ ಹಾದುಹೋಗಿರುವ ಮೈಸೂರು-ಮಳವಳ್ಳಿ ಮುಖ್ಯರಸ್ತೆಯ ಫುಟ್ ಪಾತಿನಲ್ಲಿ ತನ್ನ ಕೆಎ-17-ಎ-2929 ರ ಸ್ವರಾಜ್ ಮಜ್ದಾ ವ್ಯಾನಿನ ಒಳಗೆ ಮಲಗಿದ್ದಾಗ 1 ರಿಂದ 3ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಚಾಸಾ-1 ರವರಿಗೆ ಹಲ್ಲೆ ಮಾಡಲು ಅಲ್ಲಿಗೆ ಹೋಗಿ, 3ನೇ ಆರೋಪಿತರಾದ ನೀವು 1 ಮತ್ತು 2ನೇ ಆರೋಪಿತರನ್ನು ವ್ಯಾನಿನ ಕಿಟಕಿಯಿಂದ ಒಳಗೆ ಕಳುಹಿಸಿ, ವ್ಯಾನಿನ ಪಕ್ಕದಲ್ಲಿ ನಿಂತಿದ್ದು, 1 ಮತ್ತು 2ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಎಬ್ಬಿಸಿ ಶಾಂತಿಭಂಗವನ್ನು ಪ್ರಚೋದಿಸುವ ಉದ್ದೇಶದಿಂದ ಉದ್ದೇಶಪೂರ್ವಕ ಅವಮಾನ ಮಾಡುವ ಸಲುವಾಗಿ 1ನೇ ಆರೋಪಿಯಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ 'ಬೋಳಿಮಗನೆ ನನ್ನ ಮೇಲೆ ಗಲಾಟೆ ಮಾಡುತ್ತೀಯಾ' ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶ ಹೊಂದಿ ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ 1ನೇ ಆರೋಪಿಯಾದ ನೀವು ಕಬ್ಬಿಣದ ರಾಡಿನಿಂದ ಚಾಸಾ-1 ರವರ ಮೈಕೈ ಮೇಲೆ ಹಾಗೂ 2ನೇ ಆರೋಪಿಯಾದ ನೀವು ರಿಪೀಸ್ ಪಟ್ಟಿಯಿಂದ ಚಾಸಾ-1 ರವರ ತಲೆಯ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿ ತೀವ್ರ ಸ್ವರೂಪದ ರಕ್ತ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.307 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶ ಹೊಂದಿ 2 ನೇ ಆರೋಪಿಯಾದ ನೀವು ರಿಪೀಸ್ ಪಟ್ಟಿಯಿಂದ ಚಾಸಾ-1 ರವರ ತಲೆಯ ಮೇಲೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ನಾಲ್ಕನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ಸಮಾನ ಉದ್ದೇಶ ಹೊಂದಿ ಕಬ್ಬಿಣದ ರಾಡಿನಿಂದ ಚಾಸಾ-1 ರವರ ಎಡಗಾಲಿನ ಮೇಲೆ ಹಲ್ಲೆ ಮಾಡಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.326 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಕೊನೆಯದಾಗಿ, 1 ನೇ ಆರೋಪಿಯಾದ ನೀವು ಸಮಾನ ಉದ್ದೇಶ ಹೊಂದಿ ಚಾಸಾ-1 ರವರಿಗೆ ಭಯ ಬರುವ ರೀತಿಯಲ್ಲಿ ಅವರನ್ನು ಉದ್ದೇಶಿಸಿ 'ನಿನ್ನನ್ನು ಮುಗಿಸುವವರೆಗೆ ನನಗೆ ನೆಮ್ಮದಿ ಇಲ್ಲ' ಎಂದು ಅವರಿಗೆ ಜೀವ ಬೆದರಿಕೆಯನ್ನು ಹಾಕಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಈ ಮೇಲೆ ಹೇಳಿರುವ ದೋಷಾರೋಪಣೆ ಬಗ್ಗೆ ನಿಮ್ಮ ವಿಚಾರಣೆ ಈ ನ್ಯಾಯಾಲಯದಲ್ಲಿ ನಡೆಯತಕ್ಕದ್ದು ಎಂದು ಆದೇಶಿಸಲಾಗಿದೆ.

(ಸಯೀದುನ್ನೀಸ)

ದಿನಾಂಕ:25.06.2025. 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.